ಓ.ಎಸ್.ಸಂಖ್ಯೆ **48/2017** **ಡಿಡಬ್ಲ್ಯೂ -3**

**ದಿನಾಂಕಃ 04.08.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು - ವಾದಿ ಪರ ವಕೀಲರಿಂದ**

ನಾನು 25 ವರ್ಷದಿಂದ ದಸ್ತಾವೇಜು ದಾರರಾಗಿ ಕೆಲಸ ಮಾಡುತ್ತೀರುತ್ತೇನೆ. ದಾನಪತ್ರ, ಕ್ರಯಪತ್ರ , ವೀಲುನಾಮೆಯನ್ನು ಬರೆಯುವಾಗ ಕಾನೂನು ಏನೇನು ಇದೆ ಎಂದು ತಿಳಿದುಕೊಂಡಿರುತ್ತೇನೆ. ದಸ್ತಾವೇಜು ಬರೆಯುವಾಗ ಮೂಲ ದಾಖಲೆಗಳನ್ನು ನೋಡಿ ಬರೆದಿರುತ್ತೇನೆ. ನಾನು ದಸ್ತಾವೇಜಿನಲ್ಲಿ ಮೂಲಪತ್ರಗಳನ್ನು ಪರಿಶೀಲಿಸಿ ಬರೆದಿರುವ ಬಗ್ಗೆ ಷರಾ ಬರೆದಿಲ್ಲ. ಇಂಥಹವರ ಒಕ್ಕಣೆ ಮೇರೆಗೆ ಪತ್ರ ತಯರಾಗಿದೆ ಎಂದು ಷರಾ ಬರೆದಿರುವುದಿಲ್ಲ. ಪ್ರತಿಯೊಂದು ಪತ್ರಗಳನ್ನು ನನ್ನ ಕಛೇರಿನಲ್ಲಿ ತಯಾರು ಮಾಡುತ್ತೇನೆ ಎಂದರೆ ಸರಿ. ನನ್ನ ಕಛೇರಿಗೆ ಚಾಮಯ್ಯರವರು ನಡೆದುಕೊಂಡು ಬರುತ್ತಿದ್ದರು. ಚಾಮಯ್ಯರವರು ಮಗಳ ಹೆಸರಿಗೆ ವಿಲ್ಲು ಮತ್ತು ದಾನಪತ್ರವನ್ನು ಬರೆಯಬೇಕೆಂದು ಮಾಹಿತಿ ನೀಡಿದ್ದಾರೆ. ಮತ್ತು ರೇಷನ್ ಕಾರ್ಡ್ , ಹಳೇಯ ಕ್ರಯಪತ್ರಗಳನ್ನು ಕೊಟ್ಟಿದ್ದಾರೆ. ಚಾಮಯ್ಯನವರು ಯಾವ ಯಾವ ಸರ್ವೆ ನಂಬರಿಗೆ ಸಂಬಂಧಪಟ್ಟಂತೆ ಹಳೇಯ ಕ್ರಯಪತ್ರಗಳನ್ನು ಕೊಟ್ಟಿದ್ದರು ಎಂಬ ಪ್ರಶ್ನೆಗೆ ಜಾಸ್ತಿ ಸರ್ವೆ ನಂಬರ್ ಇದ್ದ ಕಾರಣ ನನಗೆ ನೆನಪಿಲ್ಲ ಎಂದು ಉತ್ತರಿಸುತ್ತಾರೆ. ಹಳೇಯ ಕ್ರಯಪತ್ರಗಳನ್ನು ನಾನು ತಯಾರು ಮಾಡಿದ ದಸ್ತಾವೇಜಿನ ಮಾಹಿತಿ ಅದರಲ್ಲಿ ಇತ್ತು. ಚಾಮಯ್ಯನವರು ಕುಟುಂಬದ ವಂಶಸ್ಥರ ಬಗ್ಗೆ ವಿಚಾರ ಮಾಡಿದ್ದೇನೆ. ಇತರ ಸದಸ್ಯರು ದಸ್ತಾವೇಜು ಬರೆಯಲು ಚಾಮಯ್ಯರವರಿಗೆ ಎನ್.ಒ.ಸಿ ಕೊಟ್ಟ ಬಗ್ಗೆ ದಾಖಲೆ ಇತ್ತ ಎಂದರೆ ದಾಖಲೆ ಇರಲಿಲ್ಲ. ಅದನ್ನು ಪಡೆಯುವ ಅವಶ್ಯಕತೆ ಇಲ್ಲ ಎಂದು ನಾನು ಕೇಳಿರುವುದಿಲ್ಲ. ದಿಃ18.06.2014 ರಂದು ಮಧ್ಯಾಹ್ನ 12-00 ಗಂಟೆಗೆ ನನ್ನ ಕಛೇರಿಗೆ ದಸ್ತಾವೇಜು

ತಯಾರಿಸಲು ಚಾಮಯ್ಯ ನವರು ಬಂದಿದ್ದರು ಸಂಜೆ 4–00 ಗಂಟೆ ದಸ್ತಾವೇಜು ಬರೆದು ಮುಗಿಸಿರುತ್ತೇನೆ.

**ವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.

**ದಿನಾಂಕಃ 04.08.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು – ವಾದಿ ಪರ ವಕೀಲರಿಂದ**

ಚಿಕ್ಕ ಇಂದು ವಾಡಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. 2014ಇಸವಿಯ ಜೂನ್ ತಿಂಗಳಲ್ಲಿ ಗುಂಡೇಗಲ್ಲಿನಲ್ಲಿ ಶಿಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ. ದಿನಾಂಕಃ19.06.2014 ರಂದು Casual Leave ಹಾಕಿದ್ದೆ. ಚಾಮಯ್ಯ ಮತ್ತು ರಾಜಮ್ಮ ನನ್ನ ಸಂಬಂಧಿಕರಾರಿರುತ್ತಾರೆ. 2014ನೇ ಇಸವಿಯಲ್ಲಿ ಚಾಮಯ್ಯ ರವರಿಗೆ ಎಷ್ಟು ವಯಸ್ಸಾಗಿತ್ತು ಹಾಗೂ ರಾಜಮ್ಮನವರಿಗೆ ಎಷ್ಟು ವಯಸ್ಸಾಗಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ಅವರ ಮಕ್ಕಳ ವಯಸ್ಸು ಎಷ್ಟಿತ್ತೆಂದು ನನಗೆ ಗೊತ್ತಿರುವುದಿಲ್ಲ. ಚಾವಯ್ಯನಿಗೆ ಎಷ್ಟು ಆಸ್ತಿ ಎಂದು ನನಗೆ ಗೊತ್ತಿರುವುದಿಲ್ಲ. ಚಾಮಯ್ಯನವರು ಯಾರು ಯಾರಿಗೆ ಏನೇನು ದಾಖಲೆಗಳನ್ನು ಬರೆದು ಕೊಟ್ಟಿದ್ದಾರೆಂದು ನನಗೆ ಗೊತ್ತಿಲ್ಲ. ಚಾಮಯ್ಯ ರವರ ಮನೆಯಲ್ಲಿ ಏನೇನು ವ್ಯವಹಾರ ಆಗುತ್ತಿತ್ತು ಮತ್ತು ಅವರ ಮಕ್ಕಳ ಮಧ್ಯೆ ಯಾವ ರೀತಿ ಸಂಬಂಧ ಇತ್ತು ಎಂದು ನನಗೆ ಗೊತ್ತಿಲ್ಲ. ಚಾಮಯ್ಯರವರ ಆಸ್ತಿಯನ್ನು ಸ್ವಂತ ಸಂಪಾದನೆಯಿಂದ ಖರೀದಿ ಮಾಡಿರುತ್ತಾರೋ ಅಥವಾ ಮಕ್ಕಳ ಸಂಪಾದನೆಯಿಂದ ಖರೀದಿ ಮಾಡಿದ್ದಾರೋ ಎಂದು ನನಗೆ ಗೊತ್ತಿಲ್ಲ. 2014ನೇ ಇಸವಿಯಲ್ಲಿ ಚಾಮಯ್ಯನವರಿಗೆ ಆರೋಗ್ಯ ಸರಿಯಿಲ್ಲದಿದ್ದ ಕಾರಣ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಬರುತ್ತಿದ್ದರು ಎಂದರೆ ಗೊತ್ತಿಲ್ಲ. ಚಾಮಯ್ಯ ರವರ ಮಕ್ಕಳು ಜಯರಾಜು ಮತ್ತು ಸಂದರ್ ರಾಜ್ ರವರು ಚಾಮಯ್ಯರವರನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಯಾರು ನೋಡಿಕೊಳ್ಳುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಚಾವುಯ್ಯ ರವರ ಹೆಣ್ಣು ಮಕ್ಕಳು ಬೇರೆ ಬೇರೆ ಕಡೆ ಮದುವೆಯಾಗಿ ಹೋಗಿದ್ದರಿಂದ ಅವರನ್ನು ನೋಡಿಕೊಳ್ಳಲು ಬರುತ್ತಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಿಃ18.06.2014 ರಂದು ಉಪ–ನೋಂದಣ ಕಛೇರಿ ಹನೂರು ಹೋಗಿದ್ದೆ ಎಂದರೆ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ದಿಃ18.06.2014ರಲ್ಲಿ ಶಿಕ್ಷಕ ವೃತ್ತಿ ಮಾಡುತ್ತಿದ್ದೀರ ಎಂದು ನನಗೆ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ದಿಃ18.06.2014 ರಂದು ಉಪ–ನೋಂದಣ ಕಛೇರಿ ಹನೂರು

ಹೋಗಿದ್ದೆ ಎಂದು ಪ್ರಮಾಣ ಪತ್ರದಲ್ಲಿ ಬರೆಸಿರುವುದು ಸರಿ. ದಿಃ19.06.2014 ರಂದು ಸದರಿ ಕಛೇರಿಗೆ ಹೋಗಿರುವುದಿಲ್ಲ. ದಿನಾಂಕಃ19.06.2014 ರಂದು ನಿಡಿ-41 ದಾಖಲಗೆ ಸಂಬಂಧಪಟ್ಟಂತೆ ಏನು ವ್ಯವಹಾರ ಆಗಿದೆ ಎಂದು ನನಗೆ ಗೊತ್ತಿಲ್ಲ. ದಿಃ19.06.2014 ರಂದು ಉಪ-ನೋಂದಾವಣಿ ಕಛೇರಿಗೆ ಹೋಗಿರುವುದಿಲ್ಲ ಎಂದರೆ ಸರಿ. ದಿಃ19.06.2014 ರಂದು ಯಾವ ಯಾವ ಆಸ್ತಿಗಳಿಗೆ ಏನೇನು ದಾಖಲೆ ಆಗಿದೆ ಎಂದು ನನಗೆ ಗೊತ್ತಿಲ್ಲ. ದಿಃ19.06.2014 ರಂದು ಸಬ್ ರೆಜಿಸ್ಟರ್ ಕಛೇರಿಯಲ್ಲಿ ಜಯಮ್ಮ , ಸಂದೀಪ್ ,ಚಾಮಯ್ಯ ಮತ್ತು ರಾಜು ಹಾಜರಿದ್ದರು. ಚಾಮಯ್ಯ ರವರ ಆರೋಗ್ಯ ಸ್ಥಿತಿ ಆ ಸಮಯದಲ್ಲಿ ಚೆನ್ನಾಗಿತ್ತು. ದಿಃ18.06.2014 ರಂದು ಚಾಮಯ್ಯರವರು ನಿಡಿ-41ಕ್ಕೆ ಸಹಿಯನ್ನು ಹಾಕಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಮತ್ತೇ ಇನ್ಯಾರು ಸಹಿ ಹಾಕಿದ್ದಾರೆಂದು ನನಗೆ ಗೊತ್ತಿಲ್ಲ. ನಿಡಿ-41 ಕ್ಕೆ ಬಿಕ್ಲಂದಾರರ ಕಛೇರಿಯಲ್ಲಿ ನಾನು ಸಹಿ ಹಾಕಿರುತ್ತೇನೆ. ತದನಂತರ ನಾನು ಎಲ್ಲು ಸಹಿ ಮಾಡಿರುವುದಿಲ್ಲ. ಸಂಜೆ -5-30 6-00ಗಂಟೆಗೆ ನಿಡಿ-41ಕ್ಕೆ ಸಹಿ ಹಾಕಿದ್ದೇನ ಎಂಬ ಪ್ರಶ್ನೆಗೆ ಸಾಕ್ಷಿಯು ಬೆಳಿಗ್ಗೆ ಸಹಿ ಹಾಕಿದ್ದೇನ ಅಥವಾ ಸಂಜೆ ಸಹಿ ಹಾಕಿದ್ದೇನ ಎಂದು ನನಗೆ ನೆನಪಿಲ್ಲ. ಸಾಕ್ಷಿ ಮುಂದುವರೆದು ನಾನು ಸಂಜೆ ಹಾಕಿಲ್ಲ ಎಂದು ಉತ್ತರಿಸುತ್ತಾರೆ. ನಿಡಿ-41ನ್ನು ಜಯಮ್ಮ ರವರು ನನ್ನ ಜೊತೆ ಸೇರಿ ಸೃಷ್ಟಿ ಮಾಡಿದ್ದಾರೆ ಎಂದರೆ ಸುಳ್ಳು. ನನಗೆ ನಿಡಿ-41 ರ ಬಗ್ಗೆ ಏನು ಗೊತ್ತಿಲ್ಲ ಮತ್ತು ನನ್ನ ಸಮಕ್ಷಮ ಯಾವುದೇ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ. ಚಾಮಯ್ಯ ಮತ್ತು ರಾಜಮ್ಮ ರವರಿಗೆ ಸಂಬಂಧಕಾಗಿದ್ದ ಕಾರಣ ಅವರಿಗೆ ಸಹಾಯ ಮಾಡಲು ನನ್ನ ಸಮಕ್ಷಮ ನಿಡಿ-41 ಆಗಿದೇ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 5ನೇ ಪ್ರತಿವಾದಿ ರಾಜು ಮತ್ತು ನಾನು ಸ್ನೇಹಿತ ಎಂದರೆ ಸರಿ. ದಾವಾ ಸ್ವತ್ತುಗಳು ವಾದಿ-1 ಮತ್ತು 2 ರವರ ರೇಷ್ಮೆ ಚರಕ ದಿಂದ ಸಂಪಾದನೆ ಮಾಡಿ ತಂದೆ ಹೆಸರಿಗೆ ಬರೆಸಿದ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. 2014 ಇಸವಿಯಲ್ಲಿ ಚಾಮಯ್ಯರವರಿಗೆ ಆರೋಗ್ಯ ಸರಿಯಿಲ್ಲದ ಕಾರಣ ಅವರು ದುಡಿಯುತ್ತಿರಲಿಲ್ಲ ಎಂದರೆ ಸರಿಯಲ್ಲ. ಈ ಆಸ್ತಿಗಳನ್ನು ದಾನ ಪತ್ರ ಬರೆಯಲು ಚಾಮಯ್ಯರವರಿಗೆ ಹಕ್ಕು ಇರಲಿಲ್ಲ ಎಂದರೆ ಗೊತ್ತಿಲ್ಲ. ಜಯಮ್ಮ ನವರು ವಯಸ್ಸಾದ ತಂದೆಯನ್ನು ಉಪಯೋಗಿಸಿಕೊಂಡು ಮೋಸದಿಂದ ದಾನಪತ್ರ ಬರೆಸಿಕೊಂಡಿದ್ದಾರೆ ಎಂದರೆ ಗೊತ್ತಿಲ್ಲ.

ದಿಃ18.06.2014ರಲ್ಲಿ ದಾನಪತ್ರವನ್ನು ಹೊರತುಪಡಿಸಿ ಬೇರೆ ದಾಖಲೆ ಆದ  ಬಗ್ಗೆ ನನಗೆ ಗೊತ್ತಿಲ್ಲ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.